# KANNADA

# ಕನ್ನಡ

## PAPER—II

## ಪತ್ರಿಕೆ—II

**Note :** This paper contains **fifty** (50) objective-type questions, each question carrying **two** (2) marks. Attempt **all** of them.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು** (50) ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು** (2) ಅಂಕಗಳು ಇರುತ್ತವೆ. **ಎಲ್ಲಾ** ಪ್ರಶ್ನೆಗಳನ್ನು ಉತ್ತರಿಸಿ.

***ಏಕ ಆಯ್ಕೆ ಮಾದರಿಯ ಪ್ರಶ್ನೆಗಳು.***

**1.** ಬಾದಾಮಿ ಶಾಸನದ ಛಂದಸ್ಸು

(A) ಷಟ್ಪದಿ (B) ತ್ರಿಪದಿ

(C) ಸಾಂಗತ್ಯ (D) ರಗಳೆ

**2.** ಚಂಪೂ ಪ್ರಕಾರದಲ್ಲಿರುವ ಕೃತಿ

(A) ವಡ್ಡಾರಾಧನೆ (B) ಜೀವಂಧರ ಚರಿತೆ

(C) ಸಮಯ-ಪರೀಕ್ಷೆ (D) ಸೊಬಗಿನ ಸೋನೆ

**3.** 'ಮನುಜರ ಮೇಲೆ ನಾವಮರ ಮೇಲೆ ಕನಿಷ್ಠರ ಮೇಲೆ ..... ಪೊಗಳ್ವಿ ಕೆಡಬೇಡೆಲೆ ಮಾನವ' ಎಂದು ಘೋಷಿಸಿದ ಕವಿ.

(A) ಷಡಕ್ಷರಿ (B) ರಾಘವಾಂಕ

(C) ಲಕ್ಷ್ಮೀಶ (D) ಹರಿಹರ

**4.** ಜನ್ನ ಕವಿಯ ಆಶ್ರಯದಾತ

(A) ಅಮೋಘವರ್ಷ ನೃಪತುಂಗ (B) ರಾಷ್ಟ್ರಕೂಟರ ಮೂರನೆಯ ಕೃಷ್ಣ

(C) ಹೊಯ್ಸಳ ಒಂದನೆಯ ಬಲ್ಲಾಳ (D) ಚಾಲುಕ್ಯ ತೈಲಪ

www.examrace.com

5. ಸುಕುಮಾರ ಸ್ವಾಮಿಯ ಕಥೆ ಬಂದಿರುವ ಕೃತಿ

(A) ಕಬ್ಬಿಗರ ಕಾವ್ಯ (B) ತ್ರಿಪುರದಹನ ಸಾಂಗತ್ಯ

(C) ವಡ್ಡಾರಾಧನೆ (D) ತೊರವೆ ರಾಮಾಯಣ

6. ಹಯವದನ ಎಂಬ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ ಕವಿ

(A) ವಾದಿರಾಜ (B) ವ್ಯಾಸರಾಯ

(C) ಶ್ರೀಪಾದರಾಯ (D) ವಿಜಯದಾಸ

7. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಖ್ಯಾತನಾದ ಕವಿ

(A) ಕುಮಾರ ವಾಲ್ಮೀಕಿ (B) ಕುಮಾರವ್ಯಾಸ

(C) ಭಾಸ್ಕರ ಕವಿ (D) ದೇಪರಾಜ

8. 'ಕಬ್ಬಿಗರ ಕಾವ' ರಚನೆಯಾಗಿರುವ ಸಾಹಿತ್ಯ ಪ್ರಕಾರ

(A) ಚಂಪೂ (B) ಷಟ್ಪದಿ

(C) ನಾಟಕ (D) ಗದ್ಯ

9. 'ರಾಮಧಾನ್ಯ ಚರಿತ್ರೆ' ಯನ್ನು ಬರೆದ ಕವಿ

(A) ಮಹಿಪತಿದಾಸ (B) ನಿಜಗುಣ ಶಿವಯೋಗಿ

(C) ಕನಕದಾಸ (D) ಪುರಂದರದಾಸ

10. ಕನ್ನಡ ನಿಘಂಟು ಕ್ಷೇತ್ರಕ್ಕೆ ಕೊಡುಗೆ ನೀಡಿದ ಪಾಶ್ಚಾತ್ಯ ವಿದ್ವಾಂಸ

(A) ಇ.ಪಿ. ರೈಸ್ (B) ಫ್ಲೀಟ್

(C) ಕಾಲ್ಡ್‌ವೆಲ್ (D) ಕಿಟೆಲ್

www.examrace.com

11. 'ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ' ಕೃತಿಯನ್ನು ಇಂಗ್ಲಿಷ್‌ನಲ್ಲಿ ರಚಿಸಿದವರು

(A) ಕಾಲ್ಡ್‌ವೆಲ್
(B) ಚಾಮ್‌ಸ್ಕಿ
(C) ಎಲ್ಲಿಯಟ್
(D) ಎಂ.ಬಿ. ಎಮಿನೊ

12. 'ಆನ್' ಎಂಬ ದ್ವಿತೀಯಾ ವಿಭಕ್ತಿ ಬಳಕೆಗೊಂಡ ಭಾಷಾ ಘಟ್ಟ

(A) ಹಳಗನ್ನಡ
(B) ಪೂರ್ವದ ಹಳಗನ್ನಡ
(C) ಹೊಸಗನ್ನಡ
(D) ನಡುಗನ್ನಡ

13. 'ರೀತಿರಾತ್ಮಾ ಕಾವ್ಯಸ್ಯ' ಎಂಬ ಹೇಳಿಕೆಯನ್ನು ನೀಡಿದವರು

(A) ದಂಡಿ
(B) ವಿಶ್ವನಾಥ
(C) ಮಮ್ಮಟ
(D) ವಾಮನ

14. 'ಮಾನಸಿಕ ದೂರ' ಸಿದ್ಧಾಂತವನ್ನು ಪ್ರತಿಪಾದಿಸಿದವನು

(A) ಕ್ರೋಚೆ
(B) ಐ.ಎ. ರಿಚರ್ಡ್ಸ್
(C) ಎಡ್ವರ್ಡ್ ಬುಲ್ಲೊ
(D) ಹೊರೇಸ್

15. ರಸವು ನಿಷ್ಪನ್ನಗೊಳ್ಳುವುದು

(A) ನಿರ್ದೇಶಕನಲ್ಲಿ
(B) ಪ್ರೇಕ್ಷಕನಲ್ಲಿ
(C) ನಟನಲ್ಲಿ
(D) ಕವಿಯಲ್ಲಿ

16. ಅಪಕೀರ್ತ್ಯಂಗನೆಯ ಸೆರಗ ಹಿಡಿದನು–ಇಲ್ಲಿರುವ ಅಲಂಕಾರ

(A) ರೂಪಕ
(B) ಉಪಮೆ
(C) ದೃಷ್ಟಾಂತ
(D) ಅರ್ಥಾಂತರನ್ಯಾಸ



www.examrace.com

**17.** ಕನ್ನಡದ ಮೊತ್ತಮೊದಲ ಸಾಮಾಜಿಕ ಕಾದಂಬರಿ

(A) ಇಂದಿರೆ
(B) ಇಂದಿರಾಬಾಯಿ
(C) ನಿಸರ್ಗ
(D) ವಾಗ್ದೇವಿ

**18.** 'ಟೆಂಪೆಸ್ಟ್' ನಾಟಕದ ಕನ್ನಡ ರೂಪಾಂತರ

(A) ಅಶ್ವತ್ಥಾಮನ್
(B) ಗದಾಯುದ್ಧ ನಾಟಕಂ
(C) ಹೇಮಂತ
(D) ಬಿರುಗಾಳಿ

**19.** ಪಂಪ ಪ್ರಶಸ್ತಿಯನ್ನು ಪಡೆದ ಕೃತಿ

(A) ನಾಕುತಂತಿ
(B) ಭಾರತೀಯ ಕಾವ್ಯಮೀಮಾಂಸೆ
(C) ಚಿಕವೀರ ರಾಜೇಂದ್ರ
(D) ಮೂಕಜ್ಜಿಯ ಕನಸುಗಳು

**20.** 'ಶಕ್ತಿಶಾರದೆಯ ಮೇಳ' ವನ್ನು ರಚಿಸಿದವರು

(A) ಬಸವರಾಜ ಕಲ್ಗುಡಿ
(B) ಜಿ.ಎಸ್. ಆಮೂರ
(C) ಡಿ.ಆರ್. ನಾಗರಾಜ
(D) ಕೀರ್ತಿನಾಥ ಕುರ್ತಕೋಟಿ

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು**

**21.** ಮಹಾಭಾರತದ ವಸ್ತುವನ್ನು ಆಧರಿಸಿ ಕೃತಿ ರಚನೆ ಮಾಡಿದವರು

(i) ರನ್ನ–ತಿಮ್ಮಣ್ಣ ಕವಿ
(ii) ಪೊನ್ನ–ನಾಗಚಂದ್ರ
(iii) ಪಂಪ–ಕುಮಾರವ್ಯಾಸ
(iv) ದುರ್ಗಸಿಂಹ–ಬಹ್ಮಶಿವ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iii)
(B) (i) ಮತ್ತು (ii)
(C) (i) ಮತ್ತು (iv)
(D) (ii) ಮತ್ತು (iii)

www.examrace.com

22. ಷಟ್ಪದಿಯಲ್ಲಿ ಕಾವ್ಯವನ್ನು ಬರೆದವರು

(i) ಜನ್ನ ಮತ್ತು ನಂಜುಂಡ

(ii) ರಾಘವಾಂಕ ಮತ್ತು ಚಾಮರಸ

(iii) ಪಂಪ ಮತ್ತು ರತ್ನಾಕರವರ್ಣಿ

(iv) ಕುಮಾರವಾಲ್ಮೀಕಿ ಮತ್ತು ಲಕ್ಷ್ಮೀಶ

ಇವುಗಳಲ್ಲಿ ಸರಿಯಾದ ಉತ್ತರ

(A) (ii) ಮತ್ತು (iv)
(B) (i) ಮತ್ತು (iii)
(C) (iii) ಮತ್ತು (iv)
(D) (i) ಮತ್ತು (iv)

23. ಚರಿತ್ರೆಯ ಅಂಶಗಳನ್ನು ಒಳಗೊಂಡ ಕೃತಿಗಳು

(i) ಬೆಟ್ಟದ ಜೀವ ಮತ್ತು ಜರತಾರಿ ಜಗದ್ಗುರು

(ii) ಶಾಂತಲಾ ಮತ್ತು ದುರ್ಗಾಸ್ತಮಾನ

(iii) ರಾಜಯೋಗಿ ಮತ್ತು ಚಿರಸ್ಮರಣೆ

(iv) ಚಿಕ್ಕನ ಕಣ್ಣು ಮತ್ತು ಮಾಧವಿ

ಸರಿಯಾದ ಉತ್ತರ

(A) (i) ಮತ್ತು (iv)
(B) (ii) ಮತ್ತು (iii)
(C) (ii) ಮತ್ತು (iv)
(D) (i) ಮತ್ತು (ii)

24. ಇವು ಅರ್ಥಾಲಂಕಾರಗಳು

(i) ಉಪಮೆ ಮತ್ತು ಉತ್ಪ್ರೇಕ್ಷೆ

(ii) ದೃಷ್ಟಾಂತ ಮತ್ತು ಅನುಪ್ರಾಸ

(iii) ರೂಪಕ ಮತ್ತು ದೀಪಕ

(iii) ಯಮಕ ಮತ್ತು ಅರ್ಥಾಂತರನ್ಯಾಸ

ಇವುಗಳಲ್ಲಿ ಸರಿಯಾದ ಉತ್ತರ

(A) (ii) ಮತ್ತು (iii)
(B) (i) ಮತ್ತು (iii)
(C) (iii) ಮತ್ತು (iv)
(D) (i) ಮತ್ತು (iv)

www.examrace.com

**25.** ಇವು ಕನ್ನಡದ ದೇಶೀಯ ಪದಗಳು

(i) ರಸ್ತೆ ಮತ್ತು ನನ್ನಿ

(ii) ನೀರು ಮತ್ತು ಹಾಲು

(iii) ಬಟಾಟೆ ಮತ್ತು ನೆಲ

(iv) ಹೂ ಮತ್ತು ಹಣ್ಣು

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iv) (B) (ii) ಮತ್ತು (iii)

(C) (ii) ಮತ್ತು (iv) (D) (iii) ಮತ್ತು (iv)

**26.** ಇವು ಮಹಾಕಾವ್ಯಗಳು

(i) ಶ್ರೀರಾಮಾಯಣ ದರ್ಶನಂ ಮತ್ತು ಭಾರತ ಸಿಂಧುರಶ್ಮಿ

(ii) ಗೊಲ್ಗೊಥಾ ಮತ್ತು ಚಿತ್ರಾಂಗದಾ

(iii) ಯಶೋಧರಾ ಮತ್ತು ಹೊನ್ನಿಯ ಮದುವೆ

(iv) ಶ್ರೀರಾಮಾಯಣ ಮಹಾನ್ವೇಷಣಂ ಮತ್ತು ಹರಿಚರಿತೆ

ಇವುಗಳಲ್ಲಿ ಸರಿಯಾದ ಉತ್ತರ

(A) (iii) ಮತ್ತು (iv) (B) (i) ಮತ್ತು (iv)

(C) (i) ಮತ್ತು (iii) (D) (i) ಮತ್ತು (ii)

**27.** ಸಂಶೋಧನೆಯನ್ನೇ ತಮ್ಮ ಬರವಣಿಗೆಯ ಉದ್ದೇಶವಾಗಿಟ್ಟುಕೊಂಡವರು.

(i) ಡಿ.ಎಲ್.ಎನ್ ಮತ್ತು ಚಿದಾನಂದ ಮೂರ್ತಿ

(ii) ನಿರಂಜನ ಮತ್ತು ಕೃಷ್ಣಮೂರ್ತಿ ಪುರಾಣಿಕ

(iii) ಎಂ.ಎಂ. ಕಲಬುರ್ಗಿ ಮತ್ತು ವೆಂಕಟಾಚಲ ಶಾಸ್ತ್ರೀ

(iv) ಬಿ.ಎಂ. ಶ್ರೀ ಮತ್ತು ದಿನಕರ ದೇಸಾಯಿ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iv) (B) (i) ಮತ್ತು (iii)

(C) (ii) ಮತ್ತು (iii) (D) (ii) ಮತ್ತು (iv)

**28.** ಇವು ತತ್ಪುರುಷ ಸಮಾಸಕ್ಕೆ ಉದಾಹರಣೆಗಳು

(i) ಕಲ್ಲುಮಂಟಪ ಮತ್ತು ಅರಮನೆ

(ii) ಮುಂದಲೆ ಮತ್ತು ಕಾರ್ಮೋಡ

(iii) ಮುಕ್ಕಣ್ಣ ಮತ್ತು ಇತ್ತಂಡ

(iv) ಬಿಲ್ಗಾಣ ಮತ್ತು ಮಲ್ಲಿಗೆಮಾಲೆ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iii)

(B) (ii) ಮತ್ತು (iv)

(C) (i) ಮತ್ತು (ii)

(D) (i) ಮತ್ತು (iv)

**29.** ಇವರು ರೊಮ್ಯಾಂಟಿಕ್ ಪಂಥದ ವಿಮರ್ಶಕರು

(i) ವರ್ಡ್ಸ್‌ವರ್ಥ್ ಮತ್ತು ಕೊಲರಿಜ್

(ii) ಎಲ್ಯಟ್ ಮತ್ತು ಅರಿಸ್ಟಾಟಲ್

(iii) ಶೆಲ್ಲಿ ಮತ್ತು ಮ್ಯಾಥ್ಯೂ ಅರ್ನಾಲ್ಡ್

(iv) ಐ.ಎ. ರಿಚರ್ಡ್ಸ್ ಮತ್ತು ಪ್ಲೇಟೊ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii)

(B) (ii) ಮತ್ತು (iii)

(C) (i) ಮತ್ತು (iii)

(D) (iii) ಮತ್ತು (iv)

**30.** ಇವು ಉತ್ತಮ ಪುರುಷ ವಾಚಕ ಸರ್ವನಾಮಗಳು

(i) ನಾನು

(ii) ಅವನು

(iii) ನೀನು

(iv) ನಾವು

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii)

(B) (iii) ಮತ್ತು (iv)

(C) (i) ಮತ್ತು (iii)

(D) (i) ಮತ್ತು (iv)



www.examrace.com

***ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ***

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.

ಬುದ್ಧಿಜೀವಿಯಾದ ಮನುಷ್ಯ ಈ ಭೂಮಿಯ ಮೇಲೆ ಕಾಲಿರಿಸಿ ಕೇವಲ ಮೂರು ಮಿಲಿಯ ವರ್ಷಗಳು ಕಳೆದುವು. ನಿಸರ್ಗದ ಅನ್ಯಪ್ರಾಣಿಗಳಂತೆ ಆತ ಅಲ್ಲಿನ ಹವಾಮಾನಕ್ಕೆ ಒಗ್ಗಿ, ಅಲ್ಲಿ ದೊರೆಯುತ್ತಿದ್ದ ಆಹಾರವನ್ನು ತಿಂದು, ನಿಸರ್ಗದ ಸಸ್ಯ ಸಂಪತ್ತನ್ನು, ಭೂ ಸಂಪತ್ತನ್ನು ಸದಾ ಬಳಸಿಕೊಂಡು ತಾನು ಬೇರೆ, ಜಗತ್ತು ಬೇರೆ ಎಂದು ತಿಳಿಯದೆಯೇ, ನಿನ್ನೆ ಮೊನ್ನೆಯ ತನಕವೂ ಆತ ನಿಸರ್ಗವನ್ನೇ ಸದಾ ಹೊಂದಿ ಬದುಕಿಕೊಂಡಿದ್ದ. ಭೂಮಿಯ ಇತಿಹಾಸದಲ್ಲಿ ಜೀವಕೋಟಿ ಕಾಣಿಸತೊಡಗಿ ಹೆಚ್ಚು ಕಡಿಮೆ ಮೂರು ಸಾವಿರದ ಐನೂರು ಮಿಲಿಯ ವರ್ಷಗಳಾದುವಂತೆ. ಎಂದರೆ, ಜೀವಕೋಟಿಯ ಸುದೀರ್ಘ ಇತಿಹಾಸದಲ್ಲಿ ಮನುಷ್ಯ ಕಾಣಿಸಿಕೊಂಡು ತೀರ ಅಲ್ಪ ಸಮಯವಾಯಿತು. ಅವನನ್ನು 'ಬುದ್ಧಿಜೀವಿ' ಎಂದು ಕರೆಯತೊಡಗಿದ್ದೇವೆ; ನಮಗೆ ನಾವೇ, ಇತರ ಪ್ರಾಣಿಗಳಂತೆ ಆತ ನಿಸರ್ಗದ ಪ್ರಾಣಿಗಳನ್ನು ಬೇಟೆಯಾಡಿಯೋ, ಸಸ್ಯಾಹಾರವನ್ನು ಸಂಗ್ರಹಿಸಿಯೋ ಬದುಕಿದ ಅವಧಿಯೂ ಸಾಕಷ್ಟು ದೀರ್ಘವಾಗಿದೆ. ನಿಸರ್ಗದ ಅವಲಂಬನೆ ಮಾಡಿಕೊಂಡಿದ್ದಷ್ಟು ಕಾಲವೂ ಆತ ತನಗೆ ಅನುಕೂಲವಾದ ನೆಲ, ನೀರು ಹವಾಮಾನಗಳನ್ನು ಹುಡುಕಿಕೊಂಡು ಅಲೆದಾಡಬೇಕಿತ್ತು, ತನಗೆ ಒಗ್ಗಿದ ಆಹಾರ ಸಿಗುವ ಪ್ರದೇಶದಲ್ಲಿಯೇ ಬದುಕಬೇಕಾಗಿತ್ತು. ಅಂಥ ಆಹಾರ, ಬೇಟೆಯ ಪ್ರಾಣಿಗಳಾಗಲಿ, ಸಸ್ಯೋತ್ಪನ್ನಗಳಾಗಲಿ ಆಗಿದ್ದಾಗ, ಆ ಆಹಾರದ ಸಮೃದ್ಧಿಯನ್ನು ಹೊಂದಿಕೊಂಡು ಅವನ ಸಂಖ್ಯೆ ತನ್ನಂತೆಯೇ ನಿಯಂತ್ರಣಗೊಂಡಿತ್ತು.

ಸುಮಾರು ಹತ್ತುಸಾವಿರ ವರ್ಷಗಳ ಹಿಂದೆ, ಅದೇ ಮನುಷ್ಯ, ತನ್ನ ಜೀವನದ ಕ್ರಮವನ್ನು ತೀರ ಬದಲಿಸತೊಡಗಿದ್ದು ಕಂಡುಬರುತ್ತದೆ. ಆತ ತನ್ನ ಆಹಾರವನ್ನು ತಾನೇ ಬೆಳೆಯತೊಡಗಿದ; ತನಗೆ ಅನುಕೂಲವಾದ ಪ್ರಾಣಿಗಳನ್ನು ಸಾಕತೊಡಗಿದ. ಬೇಟೆಯನ್ನು ಅವಲಂಬಿಸಿ ಬದುಕುವುದನ್ನುಬಿಟ್ಟ. ಈ ಬಗೆಯ ಕೃಷಿ ಆಧಾರಿತ ಜೀವನವನ್ನು ಎಂಟೋ, ಹತ್ತೋ ಸಾವಿರ ವರ್ಷಗಳ ಹಿಂದೆ, ಥ್ಯಾಲೆಂಡಿನಲ್ಲೂ ಪಶ್ಚಿಮೈಶಿಯದ ದಕ್ಷಿಣದಲ್ಲೂ ತೊಡಗಿದಂತೆ ಕಾಣುತ್ತದೆ. ಅಲ್ಲಿಂದ ಮುಂದೆ ಅವನ ಸಂತತಿ ತನ್ನ ಅನುಕೂಲತೆಗಾಗಿ ಕಾಡನ್ನು ಸವರಿ ಹೊಲಗಳನ್ನಾಗಿ ಮಾಡತೊಡಗಿತು; ವಿವಿಧ ಬೆಳೆಗಳನ್ನು ಬೆಳೆಯತೊಡಗಿತು. ತನ್ನ ಬುದ್ಧಿ ಬಲದಿಂದ ಹವಾಗುಣವೋ, ನಿಸರ್ಗವೋ ಪ್ರತಿಕೂಲವಾದಾಗಲೆಲ್ಲ, ಅದನ್ನು ಸಹ ಉಪಾಯವಾಗಿ ಗೆದ್ದು ಬಾಳತೊಡಗಿತು.

ಇಲ್ಲಿಂದ ಮುಂದೆ, ಮನುಷ್ಯ ಕುಲ ಎಲ್ಲೆಲ್ಲಿ ನೆಲೆಸಿ ಬಾಳತೊಡಗಿತೋ, ಅಲ್ಲೆಲ್ಲವೂ ನಿಸರ್ಗದ ಪಾಲಿಗೆ ಆತ ಮೃತ್ಯುವಾಗುತ್ತಲೇ ಬಂದಿದ್ದಾನೆ. ತನ್ನ ಸುತ್ತುಮುತ್ತಲಿನ ಪರಿಸರವನ್ನು, ಅಲ್ಲಿ ಬಾಳುತ್ತಿರುವ ಇತರ ಜೀವಕೋಟಿಗಳನ್ನು ಅಲಕ್ಷಿಸಿ, ತಾನು ನಿಸರ್ಗವನ್ನು ಗೆಲ್ಲುವುದಕ್ಕಾಗಿಯೇ ಹುಟ್ಟಿದ್ದೇನೆ ಎಂಬ ಭಾವನೆಯನ್ನು ತಳೆಯತೊಡಗಿದ ಇದರಿಂದಾಗಿ, ಭೂಮಿಯ ಮೇಲೆ ಅವನ ಕುಲ ವಿಪರೀತ ಹೆಚ್ಚಿದ್ದು ಮಾತ್ರವಲ್ಲ, ಅವನ ಸುತ್ತುಮುತ್ತಲಿನ ಪರಿಸರ ವಿಪರೀತ ಹಾನಿಗೂ ಒಳಗಾಗತೊಡಗಿತು.

ಈ ಹಾನಿ ಎಷ್ಟು, ಏನು ಎಂಬುದರ ಅಳತೆ ಸ್ಪಷ್ಟವಾಗಿ ಕಾಣಿಸತೊಡಗಿದ್ದು ಸಹ ಅವನ ಔದ್ಯಮಿಕ ಅನ್ವೇಷಣೆಗಳಿಗೆ, ಸಾಹಸಗಳಿಗೆ ನೆರವಾಗುತ್ತ ಬಂದ ವಿಜ್ಞಾನದಿಂದಲೇ. ಹಿನ್ನೆಮೊನ್ನೆಯ ತನಕವೂ ಆತ ತಾನು ವಿವಿಧ ತಂತ್ರಶಾಸ್ತ್ರಗಳಿಂದ ಅಮಿತವಾದ ಸಂಪತ್ತನ್ನು, ಸುಖವನ್ನು ಗಳಿಸಿ ಬದುಕಬಹುದೆಂಬ ಭಾವನೆ ಅವನಲ್ಲಿ ಹಬ್ಬ ತೊಡಗಿತು. ಅಂಥ ಭಾವನೆ ಅವನ ಪಾಲಿಗೂ ಹಾನಿಕಾರಿ ಎಂದು ತಿಳಿಯತೊಡಗಿದ್ದು ಕೇವಲ ಈಚಿನ ಎರಡು ಶತಮಾನಗಳಲ್ಲಿ.

ಎರಡು ಶತಮಾನಗಳ ಹಿಂದೆ ಯುರೋಪಿನಿಂದ ಅಮೇರಿಕಕ್ಕೆ ವಲಸೆ ಹೋದ ಬಿಳಿಜನರು ಯುನೈಟೆಡ್ ಸ್ಟೇಟ್ಸ್ ದೇಶದಲ್ಲಿ ಸಾವಿರಾರು ಚದರ ಮೈಲು ವಿಶಾಲವಾದ ಬಯಲು ಭೂಮಿಗಳಲ್ಲಿ ಕೃಷಿಮಾಡತೊಡಗಿದರು. ಅಲ್ಲಿನ ಕಾಡುಗಳನ್ನು ಸುಟ್ಟರು; ಯಾಂತ್ರಿಕ ನೇಗಿಲುಗಳಿಂದ ನೆಲವನ್ನು ಉತ್ತು, ಬಿತ್ತಿದರು; ವಿವಿಧ ಬೆಳೆಗಳನ್ನು ಬೆಳೆದರು. ತಮ್ಮ ಸಾಹಸಕ್ಕೆ ತಾವೇ ಹಿಗ್ಗಿದರು. ಹೀಗೆ ಮಾಡತೊಡಗಿದ ಹತ್ತಿಪ್ಪತ್ತು ವರ್ಷಗಳೊಳಗಾಗಿ, ಅವರು ಗೆದ್ದಂಥ ನೆಲ ಅವರಿಗೆ ಅನ್ನಕೊಡುವ ಯೋಗ್ಯತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿತು. ನೆಲದ ಮಣ್ಣನ್ನು ಬಂಧಿಸಿ ಹಿಡಿದ ಹುಲ್ಲು, ಪೊದೆ, ಗಿಡಮರಗಳ ಬೇರುಗಳು ನಾಶವಾಗುತ್ತಲೇ, ಆ ಭೂಮಿಯ ಮೇಲೆ ಬೀಸುವ ಗಾಳಿ ಒಂದೇಟೇ ಅಲ್ಲಿನ ಸಾರವತ್ತಾದ ಮೇಲ್ಮಣ್ಣನ್ನು ನೂರಾರು ಮೈಲುಗಳ ದೂರಕ್ಕೆ ಹಾರಿಸಿಬಿಟ್ಟಿತು. ಆದರಿಂದಾಗಿ, ಮಧ್ಯ ಅಮೇರಿಕದ ಸಾವಿರಾರು ಚದರ ಮೈಲು ವಿಶಾಲವಾದ ಹೊಲಗದ್ದೆಗಳು ಉಸುಬಿನ ಬಂಜರು ನೆಲವಾಯಿತು. ಇಂಥ ಘಟನೆ, ವಿಜ್ಞಾನದಿಂದ ನಿಸರ್ಗವನ್ನು ಗೆದ್ದ ಅನೇಕರ ಕಣ್ಣನ್ನು ತೆರೆಯುವಂತಾಯಿತು. ಯಾವುದೇ ದೇಶದ ಜನರು ತಮ್ಮ ಆಹಾರವನ್ನು ಬೆಳೆದು ಸುಖಿಯಾಗಿರುವುದಕ್ಕೆ, ಅಡುಗೆಯ ಒಲೆ ಉರಿಸುವುದಕ್ಕೆ, ಹೊದೆಯುವ ಬಟ್ಟೆ ತಯಾರಿಸುವುದಕ್ಕೆ, ಮನೆ ಕಟ್ಟಿಕೊಳ್ಳುವುದಕ್ಕೆ ಒಟ್ಟು ನೆಲದ ವಿಸ್ತಾರದ ಮೂರರಲ್ಲಿ ಒಂದರಷ್ಟು ದಟ್ಟವಾದ ಅರಣ್ಯವಿಲ್ಲದೆ ಹೋದರೆ, ಬಂಜರು ಭೂಮಿ ವಿಸ್ತರಿಸಿ, ಮನುಷ್ಯನ ಜೀವಕ್ಕೆ ಗಂಡಾಂತರ ಬರುತ್ತದೆ ಎಂಬ ಅನುಭವ ಬಂತು. ಇಂದು ಜಗತ್ತಿನ ಅಷ್ಟೂ ನಾಗರಿಕ ಮಾನವರು ಅಂಥ ಆಪತ್ತಿಗೆ ಗುರಿಯಾಗಿದ್ದಾರೆ. ಪ್ರತಿಯೊಂದು ದೇಶದಲ್ಲೂ ಅಂಥ ಪರಿಸ್ಥಿತಿ ಉಂಟಾಗಿದೆ. ನಾವು ನಮ್ಮ ಸುತ್ತಮುತ್ತಲಿರುವ ಕಾಡುಗಳನ್ನು ವಿವಿಧ ಉದ್ದಿಮೆಗಳಿಗಾಗಿಯೋ, ಬೇಸಾಯಕ್ಕಾಗಿಯೋ ಸವರಿದಲ್ಲಿ, ಅರಣ್ಯಗಳು ಸಾಕಷ್ಟು ಪ್ರಮಾಣದಲ್ಲಿ ಉಳಿಯದೆ ಹೋದಾಗ, ನಾಡಿನ ಮೇಲೆ ಬೀಳುವ ಮಳೆಯು ಕಡಿಮೆಯಾಗುತ್ತದೆ. ಸಸ್ಯ ಪದಾರ್ಥಗಳು ಕೊಳೆತು, ನೆಲವನ್ನು ಸೇರಿ, ನೆಲದ ಸಾರವನ್ನು ಒದಗಿಸುವ ಗೊಬ್ಬರದ ಅಂಶ ಕಡಿಮೆಯಾಗುತ್ತದೆ; ಗಿಡಮರಗಳ ಬೆಳವಣಿಗೆಗೆ ಅವಶ್ಯವಾದ ಜೀವಾಣುಗಳ ಸಮೃದ್ಧಿ ಇಲ್ಲದಾಗುತ್ತದೆ; ಅದೆಂಥ ನೆಲವೇ ಇರಲಿ; ಇಂದಲ್ಲ ನಾಳೆ ಅದು ಮರುಭೂಮಿಯಾಗುತ್ತದೆ.

31. ಈ ಗದ್ಯ ಭಾಗದಲ್ಲಿ ಲೇಖಕರ ಪ್ರಧಾನ ಆಶಯ

(A) ಪರಿಸರ ಪ್ರಜ್ಞೆ

(B) ಮಾನವನ ಆಹಾರದ ಹುಡುಕಾಟ

(C) ಮರುಭೂಮಿಯ ನಿರ್ಮಾಣ

(D) ಮಾನವನ ಸಾಹಸ

www.examrace.com

32. ಮಾನವನ ವಲಸೆಗೆ ಕಾರಣಗಳು

(i) ಮನುಷ್ಯನಿಗೆ ಹೊಂದಿಕೊಳ್ಳುವ ವಾತಾವರಣದ ಅನ್ವೇಷಣೆ

(ii) ಇತರರಿಗೆ ಉಪಕಾರ ಮಾಡಲು

(iii) ಆಹಾರದ ಲಭ್ಯತೆಗಾಗಿ

(iv) ಮಾನವನು ಬುದ್ಧಿಜೀವಿಯಾದುದರಿಂದ

(A) (i) ಮತ್ತು (iv)
(B) (i) ಮತ್ತು (iii)
(C) (ii) ಮತ್ತು (iii)
(D) (ii) ಮತ್ತು (iv)

33. ಅರಣ್ಯನಾಶಕ್ಕೆ ಮಾನವನಿಗೆ ಒದಗಿದ ಪ್ರೇರಣೆ

(i) ನಿಸರ್ಗವನ್ನು ಜಯಿಸುವ ಯೋಜನೆ

(ii) ಕೃಷಿ ಚಟುವಟಿಕೆ

(iii) ತನಗೆ ಬೇಕಾದ ಪ್ರಾಣಿಗಳನ್ನು ಸಾಕುವ ಯೋಜನೆ

(iv) ತನ್ನ ಆಹಾರವನ್ನು ತಾನೇ ಉತ್ಪತ್ತಿ ಮಾಡಿಕೊಳ್ಳುವುದು

(A) (i) ಮತ್ತು (iv)
(B) (ii) ಮತ್ತು (iv)
(C) (ii) ಮತ್ತು (iii)
(D) (i) ಮತ್ತು (ii)

34. ನಿಸರ್ಗವನ್ನು ನಾಶಮಾಡಬಾರದು ಎನ್ನುವ ತಿಳುವಳಿಕೆ ಉಂಟಾದುದು

(A) ಯಾಂತ್ರಿಕ ನೇಗಿಲುಗಳಿಂದ ನೆಲವನ್ನು ಉತ್ತುದರಿಂದ

(B) ಸಸ್ಯ ಪದಾರ್ಥಗಳು ಕೊಳೆತು ಹೋದುದರಿಂದ

(C) ಅರಣ್ಯ ನಾಶದ ಫಲವಾಗಿ ಉಂಟಾದ ಆಪತ್ತುಗಳಿಂದ

(D) ಉರುವಲು ಸಿಕ್ಕದೆ ಹೋದುದರಿಂದ

35. ನಿಸರ್ಗದ ಮೃತ್ಯು

(A) ಕಾಡ್ಗಿಚ್ಚು
(B) ನದೀ ಪ್ರವಾಹ
(C) ಸ್ವಾರ್ಥಿ ಮಾನವ
(D) ಕ್ರೂರ ಪ್ರಾಣಿಗಳು

www.examrace.com

**ಹೇಳಿಕೆ-ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ**

36. **ಹೇಳಿಕೆ :** ಮರ್ತ್ಯವೆಂಬುದು ಕರ್ತಾರನ ಕಮ್ಮಟವಯ್ಯಾ

**ವಿವರಣೆ :** ಮರ್ತ್ಯವೆನ್ನುವುದು ಭಗವಂತನ ಲೀಲಾರಂಗಭೂಮಿ

(A) ಹೇಳಿಕೆ ಸರಿ ವಿವರಣೆ ತಪ್ಪು

(B) ಹೇಳಿಕೆ ಮತ್ತು ವಿವರಣೆ ಎರಡೂ ತಪ್ಪು

(C) ಹೇಳಿಕೆ ಮತ್ತು ವಿವರಣೆ ಎರಡೂ ಸರಿ

(D) ಹೇಳಿಕೆ ತಪ್ಪು ವಿವರಣೆ ಸರಿ

37. **ಹೇಳಿಕೆ :** ರಸವೇ ಜನನ ವಿರಸವೇ ಮರಣ ಸಮರಸವೇ ಜೀವನ

**ವಿವರಣೆ :** ಹೊಂದಾಣಿಕೆ ಇಲ್ಲದ ಬಾಳು ನಿಷ್ಪ್ರಯೋಜಕ ಆದುದರಿಂದ ಬದುಕಿನ ಎಲ್ಲೆಡೆಯಲ್ಲೂ ವಿರಸವೇ ಇರಬೇಕು.

(A) ಹೇಳಿಕೆ ಮತ್ತು ವಿವರಣೆ ಎರಡೂ ತಪ್ಪು

(B) ಹೇಳಿಕೆ ಸರಿ ವಿವರಣೆ ತಪ್ಪು

(C) ಹೇಳಿಕೆ ತಪ್ಪು ವಿವರಣೆ ಸರಿ

(D) ಹೇಳಿಕೆ ಮತ್ತು ವಿವರಣೆ ಎರಡೂ ಸರಿ

38. **ಹೇಳಿಕೆ :** ಪದ್ಯಂ ಹೃದ್ಯಂ ಗದ್ಯಂ ವದ್ಯಂ ಹೃದ್ಯಮಪ್ಪ ಗದ್ಯದೊಳೆ ಪೇೞ್ವುದು

**ವಿವರಣೆ :** ಪದ್ಯವು ವರ್ಜಿಸತಕ್ಕುದು, ಗದ್ಯವು ಸ್ವೀಕಾರಾರ್ಹವಾದುದು. ಆದುದರಿಂದ ಹೃದ್ಯವಾದ ಪದ್ಯದಲ್ಲೇ ಹೇಳುವುದು.

(A) ಹೇಳಿಕೆ ತಪ್ಪು ವಿವರಣೆ ಸರಿ

(B) ಹೇಳಿಕೆ ಸರಿ ವಿವರಣೆ ತಪ್ಪು

(C) ಹೇಳಿಕೆ ಮತ್ತು ವಿವರಣೆ ಎರಡೂ ಸರಿ

(D) ಹೇಳಿಕೆ ಮತ್ತು ವಿವರಣೆ ಎರಡೂ ತಪ್ಪು

39. **ಹೇಳಿಕೆ :** ತಾಳುವಿಕೆಗಿಂತ ಅನ್ಯ-ತಪವು ಇಲ್ಲ

**ವಿವರಣೆ :** ಸಹನೆಯ ಸಾಧನೆ ಮಾನವ ಜನಾಂಗಕ್ಕೆ ಕಲ್ಯಾಣಕಾರಕ

(A) ಹೇಳಿಕೆ ಸರಿ ವಿವರಣೆ ತಪ್ಪು

(B) ಹೇಳಿಕೆ ತಪ್ಪು ವಿವರಣೆ ಸರಿ

(C) ಹೇಳಿಕೆ ಮತ್ತು ವಿವರಣೆ ಎರಡೂ ಸರಿ

(D) ಹೇಳಿಕೆ ಮತ್ತು ವಿವರಣೆ ಎರಡೂ ತಪ್ಪು

www.examrace.com

40. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

(A) ವ್ಯಾಸರಾಯ ಬಲ್ಲಾಳ-ಬೆಕ್ಕಿನ ಕಣ್ಣು

(B) ಎಸ್.ಎಸ್. ಭೂಸನೂರಮಠ-ಭವ್ಯಮಾನವ

(C) ದೇವನೂರ ಮಹಾದೇವ-ಪರ್ವ

(D) ಸಾರಾ ಅಬೂಬಕರ್-ಮುಳ್ಳುಗಳು

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

(A) ಗಂಗಾವತರಣ-ಪುತಿನ

(B) ಜೀವಧ್ವನಿ-ಮೊಗಳ್ಳಿ ಗಣೇಶ

(C) ಕುಬೇಚಕ-ಕುವೆಂಪು

(D) ಸರಿಸಂಪಿಗೆ-ಗಿರಡ್ಡಿ ಗೋವಿಂದರಾಜು

42. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

(A) ಆನಂದವರ್ಧನ-ಅಲಂಕಾರ

(B) ಕ್ಷೇಮೇಂದ್ರ-ಧ್ವನಿ

(C) ವಾಮನ-ರೀತಿ

(D) ಭಾಮಹ-ವಕ್ರೋಕ್ತಿ

43. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದುವುದಿಲ್ಲ?

(A) ದಂಡಿ-ಕಾವ್ಯಾದರ್ಶ

(B) ಭಾಮಹ-ಕಾವ್ಯಾಲಂಕಾರ

(C) ನಾಗವರ್ಮ-ಅಪ್ರತಿಮವೀರ ಚರಿತ

(D) ಕ್ಷೇಮೇಂದ್ರ-ಔಚಿತ್ಯ ವಿಚಾರ ಚರ್ಚೆ

44. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

(A) ಹುಡುಗನನ್ನು-ತೃತೀಯಾ ವಿಭಕ್ತಿ

(B) ಹುಡುಗನಲ್ಲಿ-ಸಪ್ತಮಿ ವಿಭಕ್ತಿ

(C) ಹುಡುಗನ-ದ್ವಿತೀಯಾ ವಿಭಕ್ತಿ

(D) ಹುಡುಗನಿಗೆ-ಪ್ರಥಮಾ ವಿಭಕ್ತಿ

www.examrace.com

**ಬಹು ಆಯ್ಕೆಯ ಜೋಡಣೆ**

**45.** (a) ಪೊನ್ನ (i) ಬಸವ ಪುರಾಣ

(b) ರತ್ನಾಕರವರ್ಣಿ (ii) ಹದಿಬದೆಯ ಧರ್ಮ

(c) ಭೀಮಕವಿ (iii) ಭುವನೈಕ ರಾಮಾಭ್ಯುದಯ

(d) ಸಂಚಿಯ ಹೊನ್ನಮ್ಮ (iv) ಮುದ್ರಾಮಂಜೂಷ

(v) ಅಪರಾಜಿತೇಶ್ವರ ಶತಕ

| | *(a)* | *(b)* | *(c)* | *(d)* |
|---|---|---|---|---|
| (A) | (ii) | (i) | (iii) | (iv) |
| (B) | (i) | (iii) | (iv) | (ii) |
| (C) | (iii) | (v) | (i) | (ii) |
| (D) | (iii) | (i) | (iv) | (v) |

**46.** (a) ಚದುರಂಗ (i) ನಾಲ್ಕನೆಯ ಆಯಾಮ

(b) ಬರಗೂರು ರಾಮಚಂದ್ರಪ್ಪ (ii) ಅಸ್ಪೃಶ್ಯರು

(c) ವೈದೇಹಿ (iii) ಶುಭಮಂಗಳ

(d) ವಾಣಿ (iv) ಹೆಜ್ಜಾಲ

(v) ಬೆಂಕಿ

| | *(a)* | *(b)* | *(c)* | *(d)* |
|---|---|---|---|---|
| (A) | (iv) | (v) | (ii) | (iii) |
| (B) | (i) | (iii) | (iv) | (v) |
| (C) | (ii) | (iii) | (iv) | (v) |
| (D) | (i) | (ii) | (iv) | (v) |

www.examrace.com

47. (a) ಭವ್ಯತೆ (i) ಟಿ.ಎಸ್. ಎಲಿಯಟ್
(b) ಅನುಕರಣ (ii) ಅರಿಸ್ಟಾಟಲ್
(c) ಇಮಾಜಿನೇಶನ್ (iii) ಹೊರೇಸ್
(d) ವ್ಯಕ್ತಿತ್ವ ನಿರಸನ (iv) ಲಾಂಜಿನಸ್
(v) ಕೋಲ್‌ರಿಜ್

| | *(a)* | *(b)* | *(c)* | *(d)* |
|---|---|---|---|---|
| (A) | (ii) | (iii) | (iv) | (v) |
| (B) | (i) | (iii) | (iv) | (v) |
| (C) | (iv) | (ii) | (v) | (i) |
| (D) | (ii) | (i) | (iv) | (v) |

**ಅನುಕ್ರಮ ಮಾದರಿ**

ಈ ಕೆಳಗಿನ ಕಾಲಾನುಕ್ರಮ ಸರಣಿಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ

48. (A) ಭೂಮಿಗೀತ, ಇಂಗ್ಲಿಷ್ ಗೀತಗಳು, ಕಿಟೆಲ್ ನಿಘಂಟು, ಚಂದ್ರಗಿರಿಯ ತೀರದಲ್ಲಿ
(B) ಇಂಗ್ಲಿಷ್ ಗೀತಗಳು, ಭೂಮಿಗೀತ, ಚಂದ್ರ ಗಿರಿಯ ತೀರದಲ್ಲಿ, ಕಿಟಲ್ ನಿಘಂಟು
(C) ಕಿಟೆಲ್ ನಿಘಂಟು, ಇಂಗ್ಲಿಷ್ ಗೀತಗಳು, ಭೂಮಿಗೀತ, ಚಂದ್ರಗಿರಿಯ ತೀರದಲ್ಲಿ
(D) ಚಂದ್ರಗಿರಿಯ ತೀರದಲ್ಲಿ, ಭೂಮಿಗೀತ, ಕಿಟೆಲ್ ನಿಘಂಟು, ಇಂಗ್ಲಿಷ್ ಗೀತಗಳು

49. (A) ನಿಜಗುಣ ಶಿವಯೋಗಿ, ಮೊದಲನೆಯ ನಾಗವರ್ಮ, ಜೇಡರ ದಾಸಿಮಯ್ಯ, ವಿಜಯದಾಸ
(B) ಮೊದಲನೆಯ ನಾಗವರ್ಮ, ಜೇಡರ ದಾಸಿಮಯ್ಯ, ನಿಜಗುಣ ಶಿವಯೋಗಿ, ವಿಜಯದಾಸ
(C) ನಿಜಗುಣ ಶಿವಯೋಗಿ, ವಿಜಯದಾಸ, ಜೇಡರ ದಾಸಿಮಯ್ಯ, ಮೊದಲನೆಯ ನಾಗವರ್ಮ
(D) ಜೇಡರ ದಾಸಿಮಯ್ಯ, ನಿಜಗುಣ ಶಿವಯೋಗಿ, ಮೊದಲನೆಯ ನಾಗವರ್ಮ, ವಿಜಯದಾಸ

50. (A) ತೀನಂಶ್ರೀ, ಆರ್. ನರಸಿಂಹಾಚಾರ್, ದೇಜಗೌ, ಆಲನಹಳ್ಳಿ ಕೃಷ್ಣ
(B) ಆರ್. ನರಸಿಂಹಾಚಾರ್, ತೀನಂಶ್ರೀ, ದೇಜಗೌ, ಆಲನಹಳ್ಳಿ ಕೃಷ್ಣ
(C) ಆಲನಹಳ್ಳಿ ಕೃಷ್ಣ, ಆರ್. ನರಸಿಂಹಾಚಾರ್, ತೀನಂಶ್ರೀ, ದೇಜಗೌ
(D) ದೇಜಗೌ, ಆರ್. ನರಸಿಂಹಾಚಾರ್, ತೀನಂಶ್ರೀ, ಆಲನಹಳ್ಳಿ ಕೃಷ್ಣ

- o 0 o -

www.examrace.com